## 17

# ಅಲೆದಾಡುವ ಸೇವಕರನ್ನು ಯಾವ ರೀತಿಯಲ್ಲಿ ಹತೋಟಿಯಲ್ಲಿಡಬಹುದು (5:19, 20)

ಕೆಲವಾರು ವರ್ಷಗಳ ಹಿಂದೆ, ನನ್ನ ಹೆಂಡತಿಯಾದ, ಮರಿಯಾ ಮತ್ತು ನಾನು ಫಾರ್ಮಿಂಗಟನ್ ಸಭೆಯಲ್ಲಿ ಒಂದು ಸಣ್ಣ ಪ್ರವಾಸವನ್ನು ಹಮ್ಮಿಕೊಂಡಿದ್ದೇವು. ನಾವು ಸ್ವತಂತ್ರರಾಗಿ ಹೋಗಿ ಬರಲು ನಮ್ಮ ಮಕ್ಕಳನ್ನು ಸಭೆಯಲ್ಲಿದ್ದ, ಡೋರಿಸ್ ಲೀವಿಸ್ ಎಂಬ ಸ್ವಯಂ ಸೇವಕಿಯ ಬಳಿಯಲ್ಲಿ ಬಿಟ್ಟಿದ್ದೆವು. ನಮ್ಮ ಮಕ್ಕಳನ್ನು ಅವರ ಮನೆಯಿಂದ ಕರಕೊಂಡು ಬರಲು ಹೋದಾಗ, ಆ ಮನೆಯನ್ನು ನೋಡಿ ನಾವು ಬಹಳ ಆಶ್ಚರ್ಯಪಟ್ಟೆವು. ಅವರು 150 ವರ್ಷಗಳ ಹಳೆಯ ಮನೆಯನ್ನು ಕೊಂಡು ಕೊಂಡು ಅದನ್ನು ಅಚ್ಚು ಕಟ್ಟು ಮಾಡುತ್ತಿದ್ದರು. ನಾವು ಮನೆಯೊಳಗೆಲ್ಲ ನಡೆದು ಅವರ ಮುಂದಿನ ಆ ಮನೆಯ ಯೋಜನೆ ಯನ್ನು ಕೇಳಲ್ಪಟ್ಟೆವು. ಡೋರಿಸ್‌ರವರ ಮಾತನ್ನು ಕೇಳುವಾಗ, ಅದು ಪ್ರೀತಿಯಿಂದುಂಟಾದ ಪ್ರಯಾಸವಾಗಿತ್ತು. ನಾನು ಊಹಿಸಿದಂತೆ ಕೆಲಸವು ಬಹಳ ಪ್ರಯಾಸಕರವಾಗಿತ್ತು ಮತ್ತು ಅದನ್ನು ಅವರು ಪ್ರೀತಿಯಿಂದಲೇ ಮಾಡಿದ್ದರು. ಪುನಃ ಸ್ಥಾಪನೆಯ ಯೋಜನೆಗೆ ಈ ಕೆಲಸವೇ ಒಂದು ಮಾದರಿಯಾಗಿತ್ತು.

ಯಾಕೋಬನ ಪತ್ರಿಕೆಯ ಅಂತ್ಯದಲ್ಲಿ ನಾವು ಧ್ಯಾನಿಸುವಾಗ ಅಲೆಯುವವರನ್ನು ಪುನಃ ಸ್ಥಾಪಿಸುವ ಕುರಿತಾಗಿ ಯಾಕೋಬನು ತಿಳಿಸುತ್ತಾನೆ. ನಮ್ಮ ಜೀವಿತದಲ್ಲಿ ನಂಬಿಕೆಯಿಂದುಂಟಾಗುವ ವ್ಯತ್ಯಾಸಗಳ ಕುರಿತಾಗಿ ಈಗಾಗಲೇ ತಿಳಿಸಿದ್ದಾನೆ (ಬಾಧೆಗಳ, ನಾಲಿಗೆಯ ಕುರಿತಾಗಿಯೂ, ಕೇಳುವದು ಮತ್ತು ದೇವರ ಚಿತ್ತವನ್ನು ನೆರವೇರಿಸುವದು ಮತ್ತು ನಮ್ಮ ನೆರೆಯವರನ್ನು ಪ್ರೀತಿಸುವ ಕುರಿತಾಗಿ ತಿಳಿಸಿದ್ದಾನೆ.). ಅವನ ಪತ್ರದ ಅಂತ್ಯದಲ್ಲಿ ಅವನು ನಮಗೆ ತಾಂತ್ರಿಕ ಬೋಧನೆಯನ್ನು ನೀಡದೆ ಅವುಗಳನ್ನು ಪ್ರಾಯೋಜಿಸಲು ಕರೆಯನ್ನು ನೀಡಿದ್ದಾನೆ. ಸುವಾರ್ತೆಯನ್ನು ಬಿಟ್ಟು ಅಲೆದು ಹೋದವರನ್ನು ಪುನಃ ಯಥಾರ್ಥವಾದ ವರ್ತನೆಗೆ ತಿರುಗಿಸಬೇಕೆಂದು ತಿಳಿಸಿದ್ದಾನೆ.

ಕ್ರೈಸ್ತರು ಅಲೆದು ಹೋಗಲು ಸಾಧ್ಯವೆಂದು ತಿಳಿಸಿದ್ದಾನೆ. ಬೈಬಲ್ ಸ್ಪಷ್ಟಪಡಿಸುತ್ತದೆ. ಒಬ್ಬನು ವೈಯಕ್ತಿಕವಾಗಿ ಕ್ರೈಸ್ತನಾದ ಮೇಲೆ, ಸೈತಾನನು ಅವನನ್ನು ಬಿಟ್ಟುಬಿಡುವದಿಲ್ಲ. ಸೈತಾನನು ಅವನನ್ನು ಇನ್ನು ಹೆಚ್ಚಾಗಿ ನಾಶಪಡಿಸಲು ಪ್ರಯತ್ನಿಸುತ್ತಾನೆ (1 ಪೇತ್ರ 5:8). ನಂಬಿಕೆಯನ್ನು ತೊರೆದು ಸುವಾರ್ತೆಯ ಕೃಪೆಯಿಂದ ಅಲೆದು ಹೋಗುವವರಿಗೆ ಭಯಂಕರ ವಾದ ಕಾರ್ಯಗಳು ಕಾಯುತ್ತಿರುತ್ತವೆ (2 ಪೇತ್ರ 2:20, 21; ಇಬ್ರಿಯ 10:26, 27).

ಸಂದಿಗ್ಧ ಸಮಸ್ಯೆಗಳಿಗೆ ಗಂಭೀರವಾದ ಆದ್ಯತೆಯನ್ನು ನೀಡಬೇಕು. ನಾವು ಬೋಧಿ ಸುವ ವೇದಿಕೆಗಳಿಂದ ಕ್ರೈಸ್ತರಿಗೆ ಎಚ್ಚರಿಕೆಯನ್ನು ಪ್ರಬೋಧನೆಗಳನ್ನು ಮತ್ತು ಸಲಹೆಗಳನ್ನು ನೀಡಬೇಕು. ಬಲಹೀನರಿಗಾಗಿ ಪ್ರಾಪಂಚಿಕರಿಗಾಗಿ, ಅಲೆಯುವವರಿಗಾಗಿ ಪ್ರಾರ್ಥಿಸುವದು ಮಾತ್ರವಲ್ಲದೆ ಅವರನ್ನು ಪುನಃ ಅನ್ಯೋನ್ಯತೆಗೆ ತರುವ ಪ್ರಯತ್ನ ಮಾಡಬೇಕು.

ಲೇವಿಸ್‌ರವರ ಮನೆಯನ್ನು ಅಚ್ಚು ಕಟ್ಟು ಮಾಡಿದ ಹಾಗೆ ಅಲೆಯುವಂತ ಸಹೋದ ರನನ್ನು ಪ್ರಯಾಸದ ಪ್ರೀತಿಯ ಮೂಲಕ ಅನ್ಯೋನ್ಯತೆಗೆ ಸೇರಿಸಬೇಕು. ಇದರಲ್ಲಿ ಪ್ರೀತಿಯ *ಮತ್ತು* ಪ್ರಯಾಸದ ಹೆಚ್ಚಾದ ಅಗತ್ಯವಿರುತ್ತದೆ. ಅಲೆಯುವವರ ಕುರಿತಾಗಿ, ಕಡೆಯ ಎರಡು ವಚನಗಳೇನು ಹೇಳುತ್ತವೆಂದು ಪರಿಶೀಲಿಸೋಣ.

## "ನಿಮ್ಮಲ್ಲಿ ಒಬ್ಬನು ..." ಸತ್ಯಮಾರ್ಗವನ್ನು ತಪ್ಪಿಹೋಗಿರಲಾಗಿ (5:19)

ಸತ್ಯವು ಜೀವಿಸುವ ಸಂಗತಿಯಾಗಿರುತ್ತದೆ. ಅದು ನಮ್ಮ ಮನಸ್ಸನ್ನು ಹಿಡಿದುಕೊ ಳ್ಳುವಾಗ ನಮ್ಮ ಜೀವಿತವು ಬದಲಾಗುತ್ತದೆ. ನಾವು ಹೊಂದಿರುವ ಸತ್ಯದ ತಿಳುವಳಿಕೆಯು ಸಂಗತಿಗಳ ತಿಳುವಳಿಕೆಗಿಂತ ಅಧಿಕವಾಗಿರಬೇಕು; ಅದು ನಮ್ಮ ಜೀವಿತದಲ್ಲಿ ಸಾಕ್ಷಿಯಾಗಿರಬೇಕು. ಉದಾಹರಣೆಗೆ ನೀನು ನಂಬಿರುವದಾದರೆ, ಸಂಕಷ್ಟಗಳ ಸಮಯದಲ್ಲಿ ನೀನು ಸಂದೇಹಿಸುವದಿಲ್ಲ, ಮತ್ತು ಕೊರತೆಯಲ್ಲಿರುವವರಿಗೋಸ್ಕರ ಚಿಂತನೆಯನ್ನು ಮಾಡುತ್ತಿ. ಮತ್ತು ಹಿಂಸೆಯ ಸಮಯದಲ್ಲಿ ತಾಳ್ಮೆಯಿಂದಿರುತ್ತಿ. ಅಲೆಯುವವರನ್ನು ಅಥವಾ ಭಕ್ತಿಯಿಂದ ದೂರವಾಗಿರುವವರನ್ನು ತಿಳಿದುಕೊಳ್ಳಲು ನಿನಗೆ ಸಾಧ್ಯವಾಗುತ್ತದೆ. ಯಾಕಂದರೆ ಅವರ ಜೀವಿತವು ಅವರು ನಂಬಿರುವ ಸತ್ಯಕ್ಕೆ ವ್ಯತಿರಿಕ್ತವಾಗಿರುತ್ತದೆ. ದೇವರನ್ನು ಬಿಟ್ಟು ದೂರವಾದ ಕ್ರೈಸ್ತನ ಕುರಿತಾಗಿ ದೇವರ ವಾಕ್ಯವು ಈ ಒಂದು ಪದದಿಂದ ವಿವರಿಸಿ, "ಅಲೆಯುವವನು" ಎಂಬ ಪದದರ್ಥವನ್ನು "ತಪ್ಪಿನಲ್ಲಿ ಬೀಳುವವನು" ಅಥವಾ "ಗರಿಯಿಲ್ಲದೆ ಇರುವವನು" ಎಂದು ತಿಳಿಸುತ್ತದೆ.

ಅಲೆದಾಡುವ ಸೇವಕರ ಕುರಿತು ಯಾಕೋಬನು ಆಸಕ್ತಿಕರವಾದ ಪದವನ್ನು ಬಳಸಿರುವನು. "ಅಲೆದಾಡು" ಅಂದರೆ, "ತಪ್ಪಿನಲ್ಲಿ ಸಿಕ್ಕಿಬಿದ್ದು, ತಪ್ಪಿಸಿ ಅಲೆದಾಡು" ಎಂಬ ಅರ್ಥ. ಕುರುಬನಿಂದಲೂ, ಹಿಂದಿನಿಂದಲೂ ತಪ್ಪಿಸಿಕೊಂಡ ಕುರಿಯ ಚಿತ್ರಣವನ್ನು ಮತ್ತಾಯನು ನೀಡುವನು (ಮತ್ತಾಯ 18:12). ದೇವರು ನೇಮಿಸಿದ ಮಾರ್ಗದಿಂದ ತಪ್ಪಿಸಿಕೊಂಡು, ತನ್ನ ಇಷ್ಟಬಂದ ಹಾಗೆ ಜೀವಿಸುವ ಕ್ರೈಸ್ತರ ನೇಮಿಸಿದ ಮಾರ್ಗದಿಂದ ತಪ್ಪಿಸಿಕೊಂಡು, ತನ್ನ ಇಷ್ಟಬಂದ ಹಾಗೆ ಜೀವಿಸುವ ಕ್ರೈಸ್ತರ ಕುರಿತಾದ ಚಿತ್ರಣವನ್ನು ಯಾಕೋಬನು ನೀಡಿರುವನು.

ಈ ಅಲೆಯುವವನ ಕುರಿತಾಗಿ ಆಳವಾದ ಅಧ್ಯಯನದ ಅಗತ್ಯತೆಯಿರುವದಿಲ್ಲ. ದೇವರ ಮೇಲೆ ದೊಡ್ಡದಾದ ನಂಬಿಕೆಯನ್ನು ಇಟ್ಟಿದ್ದ ಅಬ್ರಹಾಮನು, ಸಾರಳ ಕುರಿತಾಗಿ ಐಗುಪ್ತರಿಗೆ ಅವಳು ತನ್ನ ಸಹೋದರಿಯೆಂದು ಹೇಳುವದರಲ್ಲಿ ತನ್ನ ಸಮರ್ಪಣೆಯ ಜೀವಿತದಿಂದ ದೂರವಾಗಿ ಹೋಗಿದ್ದನು (ಆದಿಕಾಂಡ 12:9). ದೇವರ ಹೃದಯಕ್ಕೆ ಸಮೀಪನಾಗಿದ್ದ ದಾವೀದನು ಸಹ ಮತ್ತೊಬ್ಬನ ಹೆಂಡತಿಯ ಸಂಗಡ ವ್ಯಭಿಚಾರ ಮಾಡಿದ್ದರಿಂದ ದೇವರಿಂದ ದೂರವಾದನು (2 ಸಮುವೇಲ 11:2-5). ಕರ್ತನಿಗೆ ಆತ್ಮೀಯನಾಗಿದ್ದ ಪೇತ್ರನು ಸಹ, ಅಲ್ಲಗಳೆಯುವದರ ಮೂಲಕ ತಾತ್ಕಲಿಕವಾಗಿ ದೇವರಿಂದ ದೂರವಾದನು (ಮತ್ತಾಯ 26:69-74).

## "ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ..." ತಿರುಗಿಸುವ ಜವಾಬ್ದಾರಿ (5:20)

ಕೆಲವರು, ಕ್ರೈಸ್ತತ್ವವು "ಏಕಾಂತದದ ಹೋರಾಟಗಾರ" ಎಂಬುವಂತದ್ದು ಮತ್ತು ಸೈತಾನನಿಗೆ ಎದುರಾಗಿ ಹೋರಾಟ ಮಾಡಲು ಪರಸ್ಪರರ ಅಗತ್ಯವಿಲ್ಲ ಎಂಬ ಧೋರಣೆಯುಳ್ಳವರಾಗಿರುತ್ತಾರೆ, ಪರಸ್ಪರರ ಅವಶ್ಯವಿದೆ! ಆದರೆ ಅದು ನಾನಾಗಿರುವದಿಲ್ಲ. ನೀನೂ ಆಗಿರುವದಲ್ಲ ನಾವಿಬ್ಬರೂ ಎಂಬುದಾಗಿಯೇ! ಒಬ್ಬರಿಗೊಬ್ಬರು ಪರಸ್ಪರ ಜವಾಬ್ದಾರಿಯುಳ್ಳವರಾಗಿರುತ್ತೇವೆ, ಅದನ್ನು ಈ ವಾಕ್ಯಭಾಗದಲ್ಲಿಯೂ ಇತರೆ ವಾಕ್ಯಭಾಗದಲ್ಲಿಯೂ ಗಮನಿಸುತ್ತೇವೆ (ಗಲಾತ್ಯ 6:1; ಇಬ್ರಿಯ 10:24).

ಕ್ರೈಸ್ತತ್ವವನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ವಿಷಯಗಳನ್ನು ಇತತರೊಂದಿಗೆ ಮಾತನಾಡುವಲ್ಲಿ ಸಂತೃಪ್ತಿಗೊಳ್ಳುತ್ತೇವೆ. ಫುಟ್ಬಲ್ ಕುರಿತಾಗಿ, ಶಿಕಾರಿಯ ಕುರಿತಾಗಿ, ಮೀನು ಹಿಡಿಯುವ ವಾಹನಗಳ ಮತ್ತು ಹಸುಗಳ ಬಗ್ಗೆ ಮಾತಾಡುತ್ತೇವೆ, ಆದರೆ ಪರಸ್ಪರಿಗೆ ಅಗತ್ಯವಿರುವ ವಿಷಯಗಳ ಬಗ್ಗೆ ಮಾತನಾಡುವದಿಲ್ಲ. ಈ ವಿಷಯ ಸತ್ಯವಾದುದ್ದೆಂಬುದಕ್ಕೆ ಕೆಲವು ಕಾರಣಗಳು ಉದ್ಭವಿಸುತ್ತವೆ ಮೊದಲನೆಯದಾಗಿ ನಮ್ಮ ಕ್ರೈಸ್ತ ಜೀವಿತದಲ್ಲಿ ನಾವುಗಳು ಹೊಂದಾಣಿಕೆಯಿಲ್ಲದೆ ಜೀವಿಸುತ್ತಿರುವ ಕಾರಣದಿಂದ ನಮ್ಮ ಆತ್ಮೀಕ ವಿಷಯಗಳನ್ನು ಇತರ

ರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವದಿಲ್ಲ. ಅಥವಾ ಅವರಿಗಿಂತಲೂ ನಾವು ಉತ್ತಮರೆಂದು ತಿಳಿಯಬಹುದೆಂಬ ಭಯದಿಂದ ಮಾತನಾಡುವದಿಲ್ಲ. ಬಹುಶಃ ಅನೇಕ ಸಾರಿ, ಅದು ನನ್ನ ವ್ಯವಹಾರವಲ್ಲವೆಂದು ತಿಳಿಯುತ್ತೇವೆ. ಅದರ ಪರಿಣಾಮವಾಗಿ, ಸಹೋದರ ಸಹೋದರಿಯರು "ಸತ್ಯದಿಂದ ತಪ್ಪಿಹೋಗುತ್ತಾರೆ," ಮತ್ತು ನಾವು ಅವರ ಆತ್ಮೀಕ ಸ್ಥಿತಿಯನ್ನಾಗಲಿ ಜೀವಿತದ ಪರಿಸ್ಥಿತಿಯ ಕುರಿತಾಗಿಯೂ ಮಾತನಾಡುವದಿಲ್ಲ.

"ಅವನನ್ನು ಹಿಂದಕ್ಕೆ ತರುವ" ಮತ್ತು ದೇವರ ಕಡೆಗೆ ತಿರುಗಿಸುವ ಹೊಣೆ ಮತ್ತು "ಅವನನ್ನು ದುಮಾರ್ಗದಿಂದ ತಪ್ಪಿಸುವ" ಹೊಣೆಯು ನಮ್ಮದಾಗಿರುತ್ತದೆ. ಅಲೆಯುವವನನ್ನು ದೈಹಿಕವಾಗಿ "ಎಳೆದುತರುವ" ಕಾರ್ಯವು ಅಸಾಧ್ಯ. ತಿರುಗಿ ಬರಲು ಇಷ್ಟಪಡದೆ ಇರುವವನನ್ನು ದೇವರು ಸಹ ಒತ್ತಾಯಿಸುವದಿಲ್ಲವೆಂದು ನಾವುಗಳು ನೆನಪು ಮಾಡಿಕೊಳ್ಳಬೇಕು. ಆ ಕಾರ್ಯವನ್ನು ಯಾವ ಬಗೆಯಲ್ಲಿ ಮಾಡಬೇಕೆಂದು ತಿಳಿಸದೆ, ನಾವು ಅದನ್ನು ಮಾಡಲು ಬಯಕೆಯನ್ನು ಹೊಂದಿರಬೇಕೆಂದು ತಿಳಿಸುತ್ತಾನೆ ಈ ಕುರಿತಾಗಿ ಪೌಲನು ಬಲವಾದ ಮಾರ್ಗದರ್ಶನವನ್ನು ನೀಡಿದ್ದಾನೆ: "... ನಿಮ್ಮಲ್ಲಿ ಯಾರಾದರು ದೋಷದಲ್ಲಿ ಸಿಕ್ಕಿಕೊಂಡರೆ ಅಂತವನನ್ನು ಶಾಂತಭಾವದಿಂದ ತಿದ್ದಿ ಸರಿಮಾಡಿರಿ; ..." (ಗಲಾತ್ಯ 6:1). ಇದು ಮೂರ್ಖರು ಮುಂದಾಗುವ ಸಮಯವಲ್ಲ ಕೋಪವನ್ನು ಅಥವಾ ಅಸಹನೆಯನ್ನು ತೋರುವ ಸಮಯವೂ ಅಲ್ಲ. ಒಂದು ವೇಳೆ "ಅಲೆಯುವವನು" ಪ್ರತಿರೋಧವನ್ನು ಅಥವಾ ಒರಟು ತನವನ್ನು ತೋರಿಸಬಹುದು ಯಾಕಂದರೆ ಅವನು ಜಜ್ಜದವನು ಅಥವಾ ಮುರಿಯಲ್ಪಟ್ಟವನು ಆಗಿರುವ ಕಾರಣವಿರಬಹುದು.

ಅವರನ್ನು ಸರಿಪಡಿಸುವ ಪರಿಸ್ಥಿತಿಗೆ ಬರುವಾಗ ಯೇಸು ಜನರೊಂದಿಗೆ ಮಾಡಿದಂತೆಯೇ ಮಾಡಬೇಕು, ಇದೇ ಆ ಸಮಯವಾಗಿದೆ. ನಮಗೆ ಸುವಾರ್ತೆಯ ಅಗತ್ಯವಿದೆ ಮತ್ತು ಪೌಲನು ಪೇತ್ರನೊಂದಿಗೆ ಸ್ಪಧಿಸಿದಂತೆ: ಪ್ರೀತಿಯಿಂದಲೂ, ಮೃದುಸ್ವಭಾವದಿಂದಲೂ ಮತ್ತು ಸವಾಲಿನಂತೆಯೂ ಸ್ಪಂಧಿಸಬೇಕು: ಅಲೆಯುವವರ ವಿಷಯದಲ್ಲಿ ನಾವು ಪ್ರೀತಿಯಿಂದಲೂ ಮೃದುಸ್ವಭಾವದಿಂದಲೂ ಮತ್ತು ಯೇಸುವಿನ ಪ್ರೀತಿಯು ಒಳಪಡುವ ಸವಾಲಿನಿಂದಲೂ ಸ್ಪಂಧಿಸಬೇಕು. ಅನೇಕ ಸಾರಿ ಒರಟುತನದಿಂದ ತೀರ್ಪುಮಾಡುತ್ತೇವೆ, ಆದರೆ ಅದು ಯೇಸುವಿನ ಆತ್ಮವಾಗಿರುವದಿಲ್ಲ.

## "ಆತ್ಮಗಳನ್ನು ರಕ್ಷಿಸುವಂತಹ ..." ಸಾಧ್ಯತೆಗಳು (5:20)

ನಾಶನಕ್ಕೊಳಗಾಗುವ ಆತ್ಮಗಳನ್ನು ರಕ್ಷಿಸಬಹುದು. ಪಾಪದ ಪರಿಣಾಮವೇ "ಮರಣವೆಂದು" ಹೊಸ ಒಡಂಬಡಿಕೆಯು ತಿಳಿಸುತ್ತದೆ ದೇವರೊಂದಿಗಿನ ಸಂಬಂಧವನ್ನು ಪಾಪವು ಮುರಿದು ಹಾಕುತ್ತದೆ. ಪಾಪದಲ್ಲಿಯೇ ಇರವಂತ ದೇವರ ಮಗು ಪಾಪ ಮರಣಕ್ಕೆ ತುತ್ತಾಗಿರುತ್ತದೆ (ರೋಮಾಪುರ 6:23; ಇಬ್ರಿಯ 10:26, 27).

ಅವನು ಪುನಃ ಹಿಂದಿರುಗಬೇಕಾದರೆ, ದೇವರಿಂದ ದೂರವಾಗಿರುವ ಅವನನ್ನು ತಪ್ಪಾದ ಮಾರ್ಗದಿಂದ ತಪ್ಪಿಸಿ ಸಂರಕ್ಷಿಸಬೇಕು. ಆಶೀರ್ವಾದವೇ ಪಾಪಕ್ಷಮೆಯ ಪರಿಣಾಮವಾಗಿರುತ್ತದೆ. ಮೊದಲನೆಯದಾಗಿ ಬಹು ಪಾಪಗಳು ಮುಚ್ಚಲ್ಪಡುತ್ತದೆ. ಎರಡನೆದಾಗಿ ಮಾನಸಾಂತರ ಉಂಟಾಗುತ್ತದೆ (ಅಲೆಯುವವನನ್ನು ದೇವರ ಕಡೆಗೆ ಹಿಂದಿರುಗುವಂತೆ) ಮಾಡುತ್ತದೆ ರಕ್ಷಣೆಯನ್ನು, ಅಥವಾ ಪಾಪಕ್ಷಮೆಯನ್ನು ಮತ್ತು ಹಿಂತಿರುಗಿ ಬರುವ ಪ್ರಯತ್ನಕ್ಕೆ ಯಶಸ್ಸನ್ನು ನೀಡುತ್ತದೆ. (ಯೆಹೆಜ್ಕೇಲ 33:9ನ್ನು ನೋಡಿರಿ.)

## ಮುಕ್ತಾಯ

150 ವರ್ಷಗಳ ಹಳೆಯದಾದ ಡಾನ್ ಮತ್ತು ಲೇವಿಸರವರ ಮನೆಯನ್ನು ಅಚ್ಚುಕಟ್ಟಾಗಿ ಪುನಃ ಸ್ಥಾಪಿಸದೇ ಹೋಗಿದ್ದರೆ ಅದರ ಗತಿ ಏನಾಗಬಹುದಿತ್ತು? ಆ ಕೆಲಸದಲ್ಲಿ ಬಹಳಷ್ಟು

ಪ್ರಯಾಸವು ಮತ್ತು ಪ್ರೀತಿಯು ಒಳಗೊಂಡಿರುತ್ತದೆ. ಆ ಮನೆಯು ಬದಲಾವಣೆಯ ಅನುಭವವನ್ನು ಹೊಂದಿರುತ್ತದೆ.

ಸತ್ಯದಿಂದ ದೂರವಾಗಿರುವ ಕ್ರೈಸ್ತನ ಕುರಿತಾಗಿಯೂ ಅಲೆಯುತ್ತಿರುವ ಕ್ರೈಸ್ತನನ್ನು ಪುನಃ ದೇವರ ಬಳಿಗೆ ನಡಿಸಿದಂತ ಸಂಗತಿಯಲ್ಲಿಯೂ ಇದೆ ವ್ಯತ್ಯಾಸಗಳು ಅಡಕಗೊಂಡಿವೆ. ಇನ್ನೊಬ್ಬನ ಆತ್ಮದ ಕುರಿತಾಗಿ ಚಿಂತನೆ ಮಾಡಿದರ ನಿಮಿತ್ತ ಜೀವನದಲ್ಲಿ ನೂತನ ಸ್ವಭಾವವು ಉಂಟಾಗುತ್ತದೆ!